ಮರಳಿ ಮನೆಗೆ – ಅರವಿಂದ ಮಾಲಗತ್ತಿ

ಕೃತಿಕಾರರ ಪರಿಚಯ



ಅರವಿಂದ ಮಾಲಗತ್ತಿಯವರು ಕ್ರಿ.ಶ.೧೯೫೬ರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಜನಿಸಿದರು.ಜನಪ್ರಿಯ ಕವಿಯಾಗಿರುವ ಇವರು ವಿಶ್ವತೋಮುಖ –ಹೂ ಬಲುಭಾರ ,ಮೂಕನಿಗೆ ಬಾಯಿ ಬಂದಾಗ ,ಕಪ್ಪುಕಾವ್ಯ, ಮೂರನೆಯ ಕಣ್ಣು ,ನಾದ–ನಿನಾದ ,ಸಿಲಿಕಾನ್ ಸಿಟಿ ಮತ್ತು ಕೋಗಿಲೆ ,ಚಂಡಾಲ ಸ್ವರ್ಗಾರೋಹಣಂ ಕವನ ಸಂಕಲನಗಳನ್ನು ರಚಿಸಿದ್ದಾರೆ. ಕಾರ್ಯ ಎಂಬ ಕಾದಂಬರಿಯನ್ನೂ ಮುಗಿಯದ ಕತೆಗಳು ಎಂಬ ಕಥಾ ಸಂಕಲನವನ್ನೂ ಗೌರ್ಮೆಂಟ್ ಬ್ರಾಹ್ಮಣ ಎಂಬ ಆತ್ಮಕಥನವನ್ನೂ ಬರೆದಿದ್ದಾರೆ. ಜಾನಪದ ಶೋಧ ,ಭೂತಾರಾಧನೆ ,ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ ,ದಲಿತ ಪ್ರಜ್ಞೆ ,ಸಾಹಿತ್ಯ –ಸಮಾಜ ಮತ್ತು ಸಂಸ್ಕೃತಿ ಇವರ ವಿಮರ್ಶಾ ಕೃತಿಗಳಾಗಿವೆ.

ಶ್ರೀಯುತರ ಮೂಕನಿಗೆ ಬಾಯಿ ಬಂದಾಗ ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಪ್ರಶಸ್ತಿ ,ಕಪ್ಪು ಕಾವ್ಯ ಕೃತಿಗೆ ನರಸಿಂಹಯ್ಯ ಪುರಸ್ಕಾರ , ಗೌರ್ಮೆಂಟ್ ಬ್ರಾಹ್ಮಣ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳು ಲಭಿಸಿವೆ .

ಪ್ರಸ್ತುತ ಪದ್ಯಭಾಗವನ್ನು ಇವರ ವಿಶ್ವತೋಮುಖ –ಹೂ ಬಲು ಭಾರ ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಬುದ್ಧನು ಲುಂಬಿನಿಯ ವನಕ್ಕೆ ಯಾವ ರೀತಿ ಬರಬೇಕು ?

ಉ: ಬುದ್ಧನು ಲುಂಬಿನಿಯ ಬನಕ್ಕೆ ವೈಶಾಖ ಬಂದಂತೆ ಬರಬೇಕು.

೨. ಮನೆಯ ಬಾಗಿಲು ಯಾರಿಗಾಗಿ ತೆರೆದಿಹುದು ?

ಉ: ಮನೆಯ ಬಾಗಿಲು ಬುದ್ಧನಿಗಾಗಿ ತೆರೆದಿಹುದು.

೩. ಮಹಾಮನೆಯಲ್ಲಿ ಯಾವ ಮಂತ್ರವನ್ನು ಸಾರಬೇಕು ?

ಉ: ಬಹುಜನತೆಯ ಹಿತವೇ ಬಹುಜನತೆಯ ಸುಖವು ನಮ್ಮುಸಿರ ನೀತಿಯು ನಮ್ಮನೆಯ ರೀತಿಯು ಎಂಬ ಮಂತ್ರವನ್ನು ಮಹಾಮನೆಯಲ್ಲಿ ಸಾರಬೇಕು.

೪. ನಮ್ಮ ನಡೆ ಯಾರ ನಡೆಯಂತೆ ಇರಬೇಕು ?

ಉ: ಬುದ್ಧನ ನಡೆಯಂತೆ ನಮ್ಮ ನಡೆ ಇರಬೇಕು.

ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಬುದ್ಧನೆಂದರೆ ಏನೇನು ಎಂದು ಕವಿಗಳು ಹೇಳುತ್ತಾರೆ ?

ಉ: ಇಂದಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ. ಬುದ್ಧನೆಂದರೆ ನಿತ್ಯ, ಸತ್ಯ , ಅಹಿಂಸಾ ಪ್ರತಿಪಾದಕನಾದ ಬುದ್ಧನು ಶಾಂತಿದೂತ , ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದವನು, ಅವನು ಕರುಣೆಯ ಸಂಕೇತ .ಅವನು ಅಜ್ಞಾನದ ಕತ್ತಲು ಹೋಗಲಾಡಿಸುವ ಜ್ಞಾನವೆಂಬ ಬೆಳಕಿನ ಸಂಕೇತ . ಅವನು ಲುಂಬಿನಿಯ ವನದಲ್ಲಿ ಜನಿಸಿದುದು ವಸಂತನಾಗಮನವನ್ನು ಸಾರಿದಂತೆ ಎಂದು ಕವಿ ಹೇಳಿದ್ದಾರೆ.

೨. ಭವ್ಯ ಮನುಜರಾಗಿ ಬಾಳಲು ನಮ್ಮಲ್ಲಿ ಇರಬೇಕಾದ ಗುಣಗಳಾವುವು ?

ಉ: ಬಹುಜನತೆಯ ಹಿತವೇ ಬಹುಜನತೆಯ ಸುಖವು ಎಂಬ ಕಲ್ಪನೆಯು ನಮ್ಮಲ್ಲಿರಬೇಕು. ಅದೇ ನಮ್ಮ ಉಸಿರಾಗಬೇಕು, ಬಹುಜನತೆಯ ಹಿತ ಸಾಧಿಸುವುದು ನಮ್ಮ ನೀತಿಯಾಗಬೇಕು. ನಾವು ಶ್ರೇಷ್ಠ ಸಮಾಜದ ಭವ್ಯ ಮನುಜರಾಗಿ ಬಾಳಬೇಕಾದರೆ ಬುದ್ಧ ಮಾರ್ಗದಲ್ಲಿ ನಡೆಯಬೇಕು .

೩. ಬುದ್ಧನು ಬೋಧಿಸಿದ ಪಂಚಶೀಲತತ್ವಗಳು ಯಾವುವು ?

ಉ: ಐದು ಕ್ಲೇಶಕಾರಕ ಪ್ರವೃತ್ತಿಗಳಿಂದ ವಿರತರಾಗುವುದೇ ಶೀಲ ಪಾಲನೆಯ ಉದ್ದೇಶ. ಬುದ್ಧನು ದುಃಖದ ನಿರೋಧಕ್ಕಾಗಿ ರೂಪಿಸಿದ ಅಷ್ಟಾಂಗ ಮಾರ್ಗ ಸಾಧನೆಯಲ್ಲಿ ಗೃಹಸ್ಥರು ಅಳವಡಿಸಿಕೊಳ್ಳಬೇಕಾದ ಐದು ಶೀಲಗಳ ಕುರಿತು ವಿವರಿಸಿದ್ದಾನೆ. ಅವುಗಳೆಂದರೆ

- ಯಾವುದೇ ಜೀವಿಗಳನ್ನು ಕೊಲ್ಲದಿರುವುದು ಅಥವಾ ಹಿಂಸೆ ಮಾಡದಿರುವುದು.

mamatabhagwat1@gmail.com ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು

- ನಮ್ಮದಲ್ಲದ ವಸ್ತುಗಳನ್ನು ಕದಿಯದಿರುವುದು ಅಥವಾ ತೆಗೆದುಕೊಳ್ಳದಿರುವುದು .
- ಶೀಲಹರಣ ಮಾಡದಿರುವುದು ಅಥವಾ ಅತ್ಯಾಚಾರ ಮಾಡದಿರುವುದು
- ಸುಳ್ಳನ್ನು ಹೇಳದಿರುವುದು ಅಥವಾ ಅಸತ್ಯವನ್ನು ನುಡಿಯದಿರುವುದು .
- ಮಾದಕ ಪಾನೀಯ ಅಥವಾ ಮಾದಕ ವಸ್ತುಗಳನ್ನು ಸೇವಿಸದಿರುವುದು.

೪. ಬುದ್ಧನ ನಡೆ ಏನು ?ವಿವರಿಸಿ.

ಉ: ಬುದ್ಧನ ನಡೆಯು ಜಾತಿಯ ಸೀಮೆಯನ್ನು ಮೀರಿರುವುದು. ಧರ್ಮದ ಗಡಿಯಿಲ್ಲದಿರುವುದು. ಲಿಂಗ ಭೇದ ಮಾಡದಿರುವುದು. ಮೇಲು ಕೀಳು ಎಂಬ ತಾರತಮ್ಯ ತೋರದಿರುವುದು. ಸರ್ವರಲಿ ಸಮಭಾವನೆಯನ್ನು ಹೊಂದಿ ಬಾಳಿ ಬದುಕಬೇಕೆನ್ನುವುದು ಬುದ್ಧನ ನಡೆಯಾಗಿದೆ.

ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಮರಳಿ ಮನೆಗೆ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಮರಳಿ ಮನೆಗೆ ಕವನವು ಇಂದಿನ ಪ್ರಕ್ಷುಬ್ಧ ಸ್ಥಿತಿಗೆ ಬುದ್ಧನ ಆಗಮನದ ಪ್ರಸ್ತುತತೆಯನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಇಂದಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ .ಬುದ್ಧನು ಸತ್ಯ ,ಶಾಂತಿ , ಕರುಣೆಯ ಬೆಳಕು . ಸಾಮಾಜಿಕ ಪರಿವರ್ತನೆಯ ಕ್ರಾಂತಿಯನ್ನುಂಟು ಮಾಡಿದವನು. ಅಜ್ಞಾನದ ಕತ್ತಲೆಯನ್ನು ಕಳೆದು ಸುಜ್ಞಾನದ ಸುಧೆ ಚೆಲ್ಲುವವನು. ಬುದ್ಧನ ಆಗಮನವು ಲುಂಬಿನಿ ವನಕ್ಕೆ ವೈಶಾಖದ ಆಗಮನದಂತೆ . ಕತ್ತಲಾಗಿದ್ದ ,ಮಾನವೀಯತೆಯ ಸೆಲೆ ಬತ್ತಿ ಹೋಗಿದ್ದ ,ಹಿಂಸೆ ,ಕ್ರೂರತೆ ಹೆಚ್ಚುತ್ತಿದ್ದ ದಿನಗಳಲ್ಲಿ ಶಾಂತಿ ಮಂತ್ರವೆಂಬ ಹಸುರನ್ನು ಚಿಗುರಿಸಿದವನು ಬುದ್ಧ. ಬುದ್ಧನು ಬಿತ್ತಿದ್ದ , ಬುದ್ಧನಿಂದಲೇ ಉದಿಸಿದ್ದ ,ಕಟ್ಟಲ್ಪಟ್ಟಿದ್ದ ಶಾಂತಿಯ ಮನೆಯು ಮರೆತು ಹೋದ ಇಂದಿನ ದಿನಗಳಲ್ಲಿ ಬುದ್ಧ ಪುನಃ ಮರಳಿ ಬಂದು ಅವನಿಂದಲೇ ಸಾರಲ್ಪಟ್ಟಿದ್ದ ಪಂಚಶೀಲ ತತ್ವಗಳನ್ನು ನೆನಪಿಸಬೇಕಾದ ಅಗತ್ಯತೆ ಇದೆ. ಬುದ್ಧ ನಮ್ಮ ತಂದೆ ,ತಾಯಿ , ಬಂಧು ಬಳಗ ಅಂದರೆ ನಮ್ಮ ಆಲೋಚನೆಗಳಲ್ಲಿ , ನುಡಿಯಲ್ಲಿ ,ಕೃತಿಯಲ್ಲಿ ಬುದ್ಧನ ಉಪದೇಶಗಳು ನೆಲೆಸಲೇಬೇಕಾದ ಅನಿವಾರ್ಯತೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ. ಬಹುಜನ ಹಿತಾಯ ,ಬಹುಜನ ಸುಖಾಯ ತತ್ವ ಮೈಗೂಡಬೇಕಾದುದು ಅವಶ್ಯವಿದೆ. ದಿವ್ಯ ಜಗದ ಭವ್ಯ ಮನುಜರಾಗಬೇಕಾದರೆ ಬುದ್ಧನ ಉಪದೇಶ ಅನುಸರಿಸುವುದು ಅಗತ್ಯವಿದೆ. ನಾವೆಲ್ಲರೂ ಜಾತಿಯ ಸೀಮೆಯಾಚೆ, ಧರ್ಮದ ಗಡಿಯಾಚೆ ನಿಂದು ಮೇಲು ಕೀಳು ಭೇದವಿಲ್ಲದೆ ಎಲ್ಲರೂ ಸಮಾನರೆಂದು ಒಂದಾಗಿ ಬಾಳಬೇಕಿದೆ. ನಮ್ಮ ನಡೆ ಬುದ್ಧನ ಕಡೆ ,ನಮ್ಮ ನುಡಿ ಬುದ್ಧನ ನುಡಿಯಾಗಬೇಕು. ಅದಕ್ಕೆ ಬುದ್ಧನು ನಮ್ಮ ಮನೆಗೆ ,ಮನಕ್ಕೆ ಮರಳಿ ಬರಬೇಕು ಎಂದು ಕವಿ ಅರವಿಂದ ಮಾಲಗತ್ತಿಯವರು ಆಶಿಸಿದ್ದಾರೆ.

ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧.“ ಬಾರಯ್ಯ ಬಾರೊ ಬೆಳಕಿನ ಆದಿಗೆ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಅಜ್ಞಾನದ ಕತ್ತಲಿನಿಂದ ನಮ್ಮನ್ನು ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯಲು ಪುನಃ ಬುದ್ಧನ ಆಗಮನವಾಗಬೇಕಿದೆ . ಮರೆಯಾಗಿರುವ ಬುದ್ಧನ ತತ್ವಗಳು ಮತ್ತೆ ಬೆಳಕಿಗೆ ಬರಬೇಕು ಎನ್ನುವಾಗ ಕವಿ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸರ್ವರಲ್ಲಿ ಸಮಾನತೆ ಮೂಡಿಸಲು, ಶಾಂತಿ ಸ್ಥಾಪನೆ ಮಾಡಲು, ಜ್ಞಾನದ ಬೆಳಕಿನೆಡೆಗೆ ಸಾಗಬೇಕೆಂಬುದು ಬುದ್ಧನ ಉಪದೇಶಗಳನ್ನು ಅನುಸರಿಸಬೇಕೆಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. “ ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಬುದ್ಧನ ಉಪದೇಶಗಳು ನಿತ್ಯವೂ ಪ್ರಸ್ತುತವಾದವುಗಳು. ಬುದ್ಧನು ಸತ್ಯ, ಶಾಂತಿ, ಕರುಣೆ ಯ ಸಂಕೇತ . ಕ್ರಾಂತಿಕಾರಕವಾದ ಸಾಮಾಜಿಕ ಬದಲಾವಣೆಯನ್ನು ತಂದವನು. ಅವನು ಅಜ್ಞಾನದ ಕತ್ತಲೆಯನ್ನು ನೀಗಿಸುವ ಸುಜ್ಞಾನದ ಬೆಳಕಿನಂತವನು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ :ಇಂದಿನ ಅಜ್ಞಾನದ ಕತ್ತಲೆ ನೀಗಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. “ ಬಯಲಿನಲಿ ಬಂಧನ ಮೆಚ್ಚಳಾ ತಾಯಿ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಬುದ್ಧನ ಉಪದೇಶದ ದಾರಿಯಲ್ಲಿಯೇ ಸಾಗಬೇಕು. ಬುದ್ಧನೇ ನಮ್ಮ ತಂದೆ ತಾಯಿ ,ಅವನು ನಮ್ಮ ಬಂಧು ಬಳಗ ಇದ್ದಂತೆ. ಬುದ್ಧನ ಉಪದೇಶಗಳು ನಮ್ಮ ಹಿತಕ್ಕಾಗಿ ರೂಪುಗೊಂಡಂತದ್ದು .ಅದನ್ನು ಮೀರಿ ನಡೆದರೆ ಬುದ್ಧನು ಮೆಚ್ಚಲಾರ. ಐಹಿಕವಾದ ಸುಖಕ್ಕೆ ಆಸೆ ಪಡದೇ ಮೋಹವನ್ನು ತೊರೆದು ಬಾಳಬೇಕು ಎಂದು ಹೇಳುವಾಗ ಕವಿ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಬುದ್ಧನ ಉಪದೇಶದಲ್ಲಿ ನಮ್ಮ ಹಿತವು ಅಡಗಿರುವುದರಿಂದ ಅವನ ತತ್ವಗಳನ್ನು ಮೀರದೇ ಅದೇ ದಾರಿಯಲ್ಲಿ ನಡೆಯುವುದರಲ್ಲಿ ನಮ್ಮ ಹಿತವಿದೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. " ದಿವ್ಯ ಜಗದ ಭವ್ಯ ಮನುಜರಾಗಿ ನೀವು ಬಾಳಿರೊ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ ಬಹುಜನತೆಯ ಹಿತವೇ ಬಹುಜನತೆಯ ಸುಖವು ಎಂಬ ಮಹಾಮನೆಯ ಮಹಾಮಂತ್ರವನ್ನು ನಾವು ಅಳವಡಿಸಿಕೊಳ್ಳಬೇಕಾದ ಅಗತ್ಯತೆ ಇದೆ .ದಿವ್ಯ ಜಗದ ಭವ್ಯ ಮನುಜರಾಗಿ ಬದುಕಬೇಕಾದರೆ ಬುದ್ಧನ ಉಪದೇಶವನ್ನು ನಾವು ಅನುಸರಿಸಬೇಕು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಸರ್ವ ಜನರ ಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕಾದ , ಬುದ್ಧನ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕಾದ ಅಗತ್ಯತೆಯನ್ನು ಮೇಲಿನ ವಾಕ್ಯವು ಸೂಚಿಸುವುದು.

೫. " ಬುದ್ಧ ನಡೆಯೆಮ್ಮನಡೆ ಬುದ್ಧ ನುಡಿಯೆಮ್ಮನುಡಿ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ನಾವೆಲ್ಲರೂ ಜಾತಿಯ ಸೀಮೆಯಾಚೆಗೆ ಬಂದು ,ಧರ್ಮದ ಗಡಿಯಾಚೆಗೆ ನಿಂದು ,ಲಿಂಗಭೇದ ಮಾಡದೆ ,ಮೇಲುಕೀಳು ಮನೋಭಾವನೆಯನ್ನು ತೊರೆದು ಬಾಳಿ ಬದುಕಲು ನಮ್ಮ ನಡೆ ಬುದ್ಧನ ಕಡೆ ಇರಬೇಕು ಎಂದು ಹೇಳುವಾಗ ಕವಿ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ನಾವು ಬುದ್ಧನ ಉಪದೇಶದ ದಾರಿಯಲ್ಲಿ ಸಾಗಬೇಕು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ನಿತ್ಯ :ಅನಿತ್ಯ : : ಸತ್ಯ : ಅಸತ್ಯ

೨. ನಮ್ಮುಸಿರು : ಲೋಪಸಂಧಿ : : ಸೀಮೆಯಾಚೆ : ಆಗಮಸಂಧಿ

೩. ರಥ : ತೇರು : : ಪಥ : ಮಾರ್ಗ

೪. ಸುಖವು : ಪ್ರಥಮ ವಿಭಕ್ತಿ : : ಮನೆಗೆ : ಚತುರ್ಥಿ

೫. ನಿತ್ಯ : ನಿಚ್ಚ : :ವೈಶಾಖ : ಬೇಸಗೆ